2481(3143) ಶ್ರೀ ಈಶ್ವರಪ್ಪ ಕೆ.ಎಸ್. (ಶಿವಮೊಗ್ಗ):–ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಮೆಗ್ಗಾನ್ ಆಸ್ಪತ್ರೆಯ ಕಟ್ಟಡದ ಉದ್ಘಾಟನೆ ವಿಳಂಬವಾಗಲು ಕಾರಣಗಳೇನು;

ಆ) ಈ ಆಸ್ಪತ್ರೆಗೆ ಅಗತ್ಯವಿರುವ ಉಪಕರಣಗಳು ಯಾವುವು;

ಇ) ಅಗತ್ಯ ಉಪಕರಣಗಳನ್ನು ಒದಗಿಸಲಾಗಿದೆಯೇ;

ಈ) ಇಲ್ಲದಿದ್ದಲ್ಲಿ ಕಾರಣಗಳೇನು;

ಉ) ಅಗತ್ಯ ಉಪಕರಣಗಳನ್ನು ಯಾವಾಗ ಒದಗಿಸಲಾಗುವುದು?

ಶ್ರೀ ಎನ್. ಚಲುವರಾಯಸ್ವಾಮಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯ ಕಟ್ಟಡದ ಉದ್ಘಾಟನೆಯು ದಿನಾಂಕ: 06.03.2005ರಂದು ಬೆಳಿಗ್ಗೆ 11–00ಕ್ಕೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ನೆರವೇರಿಸಿರುತ್ತಾರೆ.

ಆ) 1. ಸೆಂಟ್ರಲ್ ಆಕ್ಸಿಜನ್ ಸಿಸ್ಟಂ ಪ್ಲಾಂಟ್.

2. ಡಯಾಲಿಸಿಸ್ ಯಂತ್ರಗಳು 2.

3. ಇಎನ್‌ಟಿ ವಿಭಾಗಕ್ಕೆ ಅಪರೇಷನ್ ಮೈಕ್ರೋ ಸ್ಕೋಪ್.

4. ಸರ್ಜರಿ ವಿಭಾಗಕ್ಕೆ ಫಬರ್ ಅಪ್ಟಿಕ್ ಎಂಡೋ ಸ್ಕೋಪ್ ವಿತ್ ಕಲರ್ ಮಾನೀಟರ್ ಮತ್ತು ಪ್ರಿಂಟರ್ ಕಂಪ್ಯೂಟರ್.

5. ಸಿಟಿ ಸ್ಕ್ಯಾನ್.

6. ಆಧುನಿಕ ಅಡುಗೆ ಉಪಕರಣಗಳು.

7. ಆಧುನಿಕ ಲಾಂಡ್ರಿ ಉಪಕರಣಗಳು.

ಇ) ಇಲ್ಲ.

ಈ) ಈ ಬಗ್ಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಉ) 2005–2006ನೇ ಸಾಲಿನಲ್ಲಿ ಪೂರೈಸಲು ಕ್ರಮ ತೆಗೆದುಕೊಳ್ಳಲಾಗುವುದು.

2482(3144) ಶ್ರೀ ಈಶ್ವರಪ್ಪ ಕೆ.ಎಸ್. (ಶಿವಮೊಗ್ಗ):–ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಸರ್ಕಾರಿ ಆಯುರ್ವೇದಿಕ್ ಆಸ್ಪತ್ರೆ ಕಟ್ಟಡ ಕೆಲಸವನ್ನು ಅರ್ಧದಲ್ಲೇ ನಿಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಆಸ್ಪತ್ರೆ ಕಟ್ಟಡ ಕಾಮಗಾರಿಯ ಅಂದಾಜು ವೆಚ್ಚ ಎಷ್ಟು;

ಇ) ಈಗ ವೆಚ್ಚ ಮಾಡಿರುವ ಹಣ ಎಷ್ಟು;

ಈ) ಕಟ್ಟಡ ಪೂರ್ಣಗೊಳ್ಳಲು ಅಗತ್ಯ ಇರುವ ಹಣ ಎಷ್ಟು;